## ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ.ನಂ.1003/2024**

**ಪಿರ್ಯಾದಿ** : ರಾಜ್ಯ ಸರ್ಕಾರ,
ಗೋಣಿಕೊಪ್ಪ ಪೋಲೀಸ್ ಠಾಣೆ.

**ವಿರುದ್ದ**

**ಆರೋಪಿ** : 1. ಶ್ರೀ ರಂಜಿತ್ ಪಿ.ಕೆ,
ತಂದೆ: ಕೃಷ್ಣನ್,
ಪ್ರಾಯ 28 ವರ್ಷ,
ವಾಸ: ಚೀನಿಹಡ್ಲು, ಮರಪಾಲ ಗ್ರಾಮ,
ತಿತಿಮತಿ, ಗೋಣಿಕೊಪ್ಪ,
ಪೊನ್ನಂಪೇಟೆ ತಾಲ್ಲೂಕು, ಕೊಡಗು.

**ಆರೋಪಣೆ**

ಶ್ರೀ ಶ್ರೀನಾಥ್ ಎ,. ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:

ದಿನಾಂಕ **29.04.2024**ರಂದು ಸಮಯ ಬೆಳಿಗ್ಗೆ **10.30** ಗಂಟೆಗೆ ಗೋಣಿಕೊಪ್ಪ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ನೋಕ್ಯಾ ತಿತಿಮತಿ ಗ್ರಾಮದ ಕಲ್ತೋಡಿನ ಚೆಪ್ಪುಡಿರ ಸುರೇಶ್ ರವರ ಮನೆಗೆ ಹೋಗುವ ಸಾರ್ವಜನಿಕ ಮಣ್ಣು ರಸ್ತೆಯಲ್ಲಿ 1ನೇ ಆರೋಪಿಯಾದ ನೀವು ಇತರೆ ಆರೋಪಿಗಳೊಡನೆ ಸೇರಿಕೊಂಡು ತಮ್ಮ ಲಾಭಕ್ಕೋಸ್ಕರ ನಗದು ಹಣವನ್ನು ಪಣವನ್ನಾಗಿ ಇಟ್ಟುಕೊಂಡು ಇಸ್ಪೀಟ್ ಎಲೆಗಳ ಸಹಾಯದಿಂದ ಅಂದರ್ ಬಾಹರ್ ಎಂಬುದಾಗಿ ಹೇಳಿಕೊಂಡು ಜುಜಾಟವಾಡುತ್ತಿರುತ್ತೀರಿ ಎಂಬುದಾಗಿರುತ್ತದೆ. ಆ ಮೂಲಕ **1**ನೇ ಆರೋಪಿಯಾದ ನಿಮ್ಮ ವಿರುದ್ಧ ಕರ್ನಾಟಕ ಪೋಲೀಸ್ ಕಾಯ್ದೆ ಕಲಂ **87** ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಅವರ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

28-4-26.

**ದಿನಾಂಕ 28.04.2026.**
**ಸ್ಥಳ: ಪೊನ್ನಂಪೇಟೆ.**

**ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರದನ್ಯಾದಂ,ಪೊನ್ನಂಪೇಟ**

## ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂರವರ ನ್ಯಾಯಾಲಯ, ಪೊನ್ನಂಪೇಟೆ.

**ಸಿ.ಸಿ.ನಂ.1003/2024**

**ಪಿರ್ಯಾದಿ** : ಕರ್ನಾಟಕ ಸರ್ಕಾರ,
ಗೋಣಿಕೊಪ್ಪ ಪೋಲೀಸ್,

**ವಿರುದ್ಧ**

**ಆರೋಪಿ** :1. ಶ್ರೀ ರಂಜಿತ್ ಪಿ.ಕೆ,

**ದಂಡ ಪ್ರಕ್ರಿಯಾ ಸಂಹಿತೆ ಕಲಂ 251ರಡಿ ಆರೋಪಿಯ ಹೇಳಿಕೆ**

ಪ್ರಶ್ನೆ.1:- ಇದೀಗ ಓದಿ ಹೇಳಿದ ಆರೋಪಣೆಯು ನಿನಗೆ ಅರ್ಥವಾಯಿತೆ?

ಉತ್ತರ: ಅರ್ಥವಾಯಿತು.

ಪ್ರಶ್ನೆ.2:- ನೀನು ನಿನ್ನ ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆ ಬಯಸುವೆಯಾ?

ಉತ್ತರ: ತಪ್ಪಾಯಿತು, ದಂಡ ಕಟ್ಟುತ್ತೇನೆ.

(ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ವಿವರಿಸಿದ ನಂತರ ಆತ ನೀಡಿದ ಉತ್ತರಗಳನ್ನು ನನ್ನಿಂದ ದಿ:28.04.2026 ರಂದು ದಾಖಲೆ ಮಾಡಿಕೊಳ್ಳಲಾಯಿತು)

28-4-26.
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ,ಪೊನ್ನಂಪೇಟೆ

ದಿನಾಂಕ 28.04.2026
ಸ್ಥಳ: ಪೊನ್ನಂಪೇಟೆ.

ರಂಜಿತ್